ಸಾಕ್ಷಿಯನ್ನು ದಿನಾಂಕಃ 20/06/2026 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ**

ನೀವು ವಯಸ್ಸಿಗೆ ಬಂದಾಗಿನಿಂದ ಒಂದೇ ತರ ಸಹಿ ಮಾಡುತ್ತೀರಿ ಎಂದರೆ ಸಾಕ್ಷಿ ಬದಲಾವಣೆ ಆಗಿರುತ್ತವೆ ಎಂದು ಹೇಳುತ್ತಾರೆ. ಸಾಕ್ಷಿಗೆ ಅವರ ಪ್ರತಿವಾದ ಪತ್ರವನ್ನು ತೋರಿಸಲಾಗಿ ಅದಕ್ಕಿರುವ ಸಹಿಯನ್ನು ತನ್ನದೆ ಎಂದುಹೇಳುತ್ತಾರೆ. ಆದ್ದರಿಂದ ಅದನ್ನು ನಿಪಿಃ 23 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿಃ 23(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಅವರ ಮುಖ್ಯ ವಿಚಾರಣಾ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿಃ 24 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 24(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ 17/02/2026 ರ ಪಾಟೀ ಸವಾಲಿನ (deposition) ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿಃ 25 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 25(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ದಿಃ 03/06/2026 ರ ಪಾಟೀ ಸವಾಲಿನ (deposition) ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿಃ 26 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 26(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿಃ 7 ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 7(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಅದೇ ದಾಖಲಿಯಲ್ಲಿರುವ 1 ನೇ ಪುಟದಲ್ಲಿರುವ ಸಹಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿಃ 7(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯಲ್ಲಿರುವ ಫೋಟೋ ಪಕ್ಕ ಮಾಡಿರುವ ಸಹಿಗಳನ್ನು ತನ್ನದೆ ಎಂದು ಗುರುತಿಸಿದ್ದರಿಂದ ಅದನ್ನು ನಿಪಿಃ 7(ಸಿ) ಎಂದು ಗುರುತಿಸಲಾಯಿತು. ನೀವು ಮೋಸ ಮಾಡುವ ಉದ್ದೇಶದಿಂದ ಸಹಿಗಳಲ್ಲಿ ವ್ಯತ್ಯಾಸ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಹರ್ತಿ ಗ್ರಾಮದ ನಿವಾಸಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ವಾದಿಗಳು ಬೆಳ್ಳಟ್ಟಿ

ಗ್ರಾಮದ ನಿವಾಸಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎಂದು ಹೇಳುತ್ತಾರೆ. ನೀವು ಅಲ್ಲಿ ವಾಸವಾಗಿದ್ದೀರಿ ಎಂದು ತೋರಿಸಲು ನಿಮ್ಮ ರೇಷನಕಾರ್ಡ, ಆಧಾರ ಕಾರ್ಡ ಮತ್ತು ಓಟರ ಐಡಿ ಕಾರ್ಡ ಹಾಜರು ಮಾಡಿದ್ದೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ಎಫ್ ಡಿ ಪಿ ಯಲ್ಲಿ ರಾಜೀಯಾಗಿದ್ದು ಅದರಲ್ಲಿ ಮೂಲ ಕುಟುಂಬದ ಆಸ್ತಿ ಎಂದರೆ 31 ಎಕರೆ 34 ಗುಂಟೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಅತ್ತೆಯಾದ ಶಿವಕ್ಕನಿಗೆ 3 ಎಕರೆ 6 ಗುಂಟೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ರೇಣುಕಾ ಮತ್ತು ಚೆನ್ನವ್ವ ಇವರಿಗೆ ತಲಾ 3 ಎಕರೆ 6 ಗುಂಟೆ ಹೋಗಿದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ನಿಮ್ಮ ಅಪ್ಪನಿಗೆ 5 ಎಕರೆ 26 ಗುಂಟೆ ಬಂದಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 5 ಎಕರೆ 26 ಗುಂಟೆಯಲ್ಲಿ ನಿಮ್ಮ ಮತ್ತು ನಿಮ್ಮ ಸಹೋದರಿ ಮಂಜುಳಾ ರವರ ಹೆಸರಿನಲ್ಲಿ ಆಗಿದೆ ಎಂದರೆ ಸರಿ. 7 ಎಕರೆ 32 ಗುಂಟೆ ಎಲ್ಲಾ ಜಮೀನುಗಳು ನಿಮ್ಮ ಹೆಸರಿನಲ್ಲಿ ಇವೆ ಎಂದರೆ ಸರಿ. ಈ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಜಮೀನು ನಿಮ್ಮ ಕುಟುಂಬಕ್ಕೆ ಇಲ್ಲ ಎಂದರೆ ಸರಿ. ಈ ಜಮೀನುಗಳ ಪೈಕಿ ನಿಮ್ಮ ತಾಯಿಗೆ ಅಂದರೆ ನಿಮ್ಮ ತಂದೆಯ ಪಾಲಿನ ಆಸ್ತಿಯನ್ನು ಅವರಿಗೆ ಹೋಗಿಲ್ಲ ಎಂದರೆ ಸಾಕ್ಷಿ ಇಲ್ಲ ಸ್ವತಹಃ ಮುಂದುವರೆದು ನನಗೆ ದಾನ ಮಾಡಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ತಾಯಿಗೂ ಮತ್ತು ಚನ್ನಬಸಪ್ಪನಿಗೂ ಯಾವುದೇ ವಿವಾಹ ವಿಚ್ಛೇದನ ಆಗಿರಲಿಲ್ಲ ಎಂದರೆ ಸರಿ. ನಿಮ್ಮ ತಾಯಿ ನಿಮ್ಮ ತಂದೆಯ ಜೊತೆ ಲಗ್ನ ಮಾಡಿಕೊಂಡ ದಿನದಿಂದ ನಿಮ್ಮ ತಂದೆ ಜೀವಂತ ಇರುವವರೆಗೂ ಅವರ ಜೊತೆ ವಾಸವಾಗಿದ್ದರು ಎಂದರೆ ಸರಿ. ಈಗಲೂ ಸಹ ನಿಮ್ಮ ತಾಯಿ ಮೂಲ ಕುಟುಂಬದ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಈ ಜಮೀನು ಹೊರತುಪಡಿಸಿ ನಿಮ್ಮ ತಾಯಿಗೆ ಬೇರೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿ. ಅದೇ ರೀತಿ ನಿಮ್ಮ ಅಕ್ಕನಿಗೂ ಯಾವುದೇ ನೌಕರಿ ಯಾಗಲಿ ಮತ್ತು ಉತ್ಪನ್ನ ಆಗಲಿ ಇಲ್ಲ ಎಂದರೆ ಸರಿ. ಗಂಡ ತೀರಿಕೊಂಡ ನಂತರ ಅವನ ಆಸ್ತಿಯಲ್ಲಿ ಹೆಂಡತಿಗೆ ಹಿಸ್ಸೆ ಇದೆ ಎಂದರೆ ಸರಿ. ಅದೇ ರೀತಿ ನಿಮ್ಮ ಅಪ್ಪ ತೀರಿಕೊಂಡ ನಂತರ ನಿಮ್ಮ ತಾಯಿಗೆ ಅವರ ಆಸ್ತಿಯಲ್ಲಿ ಯಾವುದೇ ಭಾಗ ಕೊಟ್ಟಿಲ್ಲ ಎಂದರೆ ಸರಿ.

ದಾವಾ ಆಸ್ತಿಗಳ ಜಮೀನುಗಳ ಚೆಕ್ಕಬಂದಿ ಹೇಳಲು ಆಗುವುದಿಲ್ಲ ಎಂದರೆ ಸರಿ. ನಿಮ್ಮ ಹೊಲಕ್ಕೆ ಹತ್ತಿ ಪಾಪಣ್ಣವರ ಜಮೀನು ಇದೆ ಎಂದರೆ ಸರಿ. 3 ನೇ ಸಾಕ್ಷಿದಾರ ಮಾಬುಸಾಬ ರವರು ಜಮೀನನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿ. ನಿಮ್ಮ ಮನೆಯ ಮುಂದೆ ನವಲಿಶಂಕ್ರಪ್ಪ ಅಂದರೆ ಪಿ ಡಬ್ಲೂಃ 4 ನೇ ದವರ ಮನೆ ಇದೆ ಎಂದರೆ ಸರಿ. ನವಲಿ ಶಂಕ್ರಪ್ಪ ರವರ ಮನೆಯಲ್ಲಿ ಟ್ರ್ಯಾಕ್ಟರ ಮತ್ತು ಎತ್ತುಗಳು ಮತ್ತು ಬೆಳೆ ಹೊಡೆಯುವ ಸಾಮಾಗ್ರಿಗಳು ಇವೆ ಎಂದರೆ ಸರಿ. ಸದರಿ ನವಲಿಶಂಕ್ರಪ್ಪ ಮಂದಿ ಜಮೀನನಲ್ಲಿ ಉಳುಮೆ ಮಾಡುವುದು, ಬಿತ್ತುವುದು  ಬಾಡಿಗೆ ತೆಗೆದುಕೊಂಡು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಾಯಿ ಸದರಿ ನವಲಿಶಂಕ್ರಪ್ಪ ರವರಿಗೆ ಲಾವಣಿ ಮೂಲಕ ಕೊಟ್ಟಿದ್ದರಿಂದ ಅವರೆ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ಅಕ್ಕನ ಗಂಡ ತೀರಿಕೊಂಡಾಗಿನಿಂದ ನಿಮ್ಮ ತಾಯಿ ನವಲಿಶಂಕ್ರಪ್ಪ ನಿಗೆ ಜಮೀನು ಕೊಟ್ಟು ಉಳುಮೆ ಮಾಡಿಸುತ್ತಾರೆ ಎಂದರೆ ಸರಿಯಲ್ಲ. ನೀವು ಸದರಿ ಜಮೀನನ್ನು ಸ್ವತಹಃ ಮಾಡುತ್ತೀರಿ ಎಂದು ತೋರಿಸಲು ಸಾಕ್ಷಿ ಮಾಡಿಸುತ್ತೀರಾ ಎಂದರೆ ಇಲ್ಲ ಎಂದು ಹೇಳುತ್ತಾರೆ. ನಿಪಿಃ 8 ರ ಪ್ರಕಾರ ನಿಮ್ಮ ಅಕೌಂಟ್ ಗೆ ಹಣ ಜಮಾ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ವಾಪಾಸ್ಸು ಅವರಿಗೆ ಹಣ ಕೊಟ್ಟಿದ್ದೇನೆಂದು ಹೇಳುತ್ತಾರೆ, ಅದರ ಬಗ್ಗೆ ನನ್ನ ಬಳಿ ರಶೀದಿ ಇದೆ ಎಂದು ಹೇಳುತ್ತಾರೆ. ನಿಮ್ಮ ತಾಯಿ ನ್ಯಾಯಾಲಯಕ್ಕೆ ಬಂದು ಪ್ರಕರಣ ದಾಖಲಿಸಿ ತಡೆಆಜ್ಞೆ ತೆಗೆದುಕೊಂಡಿದ್ದರಿಂದ ನೀವು ಮತ್ತು ನಿಮ್ಮ ಗಂಡ ನಿಮ್ಮ ತಾಯಿಯ ಮನೆಗೆ ಹೋಗಿ ಅವರ ಮೇಲೆ ಹಲ್ಲೆ ಮಾಡಿದ್ದೀರಿ ಎಂದರೆ ಸರಿಯಲ್ಲ. ಅದರ ಬಗ್ಗೆ ಪೊಲೀಸ ಠಾಣೆಗೆ ನಿಮ್ನ ತಾಯಿ ದೂರು ಕೊಟ್ಟಿದ್ದಾರೆ ಮತ್ತು ಪೊಲೀಸರು ನಿಮ್ಮನ್ನು ವಿಚಾರಣೆ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಸ್ವತಹಃ ಮುಂದುವರೆದು ಹಣ ಕೊಡುವ ವಿಚಾರವಾಗಿ ಪೊಲೀಸ ಠಾಣೆಗೆ ಹೋಗಿದ್ದೇವು, ನಾನು ಹಣ ಕೊಟ್ಟಿದ್ದೇನೆ, ಆಗ ಆ ಪ್ರಕರಣ ಮುಕ್ತಾಯ ಆಗಿದೆ ಎಂದು ಹೇಳುತ್ತಾರೆ. ಸಾಕ್ಷಿಗೆ  ಅವರ ಪ್ರತಿವಾದ ಪತ್ರದ 3 ನೇ ಪುಟವನ್ನು ತೋರಿಸಿ ಅದರಲ್ಲಿ **'ದಾವಾ 1(ಎ) ಆಸ್ತಿಯು ಈಗಲೂ ವಾದಿಯರು ಹಾಗೂ ಪ್ರತಿವಾದಿಯರ ಜಂಟಿ ಹೆಸರಿನಿಂದ ಜಂಟಿ ಮಾಲ್ಕಿ ಕಬ್ಜಾವಹಿವಾಟಿಯಲ್ಲಿರುತ್ತದೆ'**

ಸದರಿ ಭಾಗದ ಸಾಲನ್ನು ನಿಪಿಃ 23(ಎಫ್) ಎಂದು ಗುರುತಿಸಲಾಯಿತು. ವಾದಿಗಳು ಅನೂಸೂಚಿತ ಆಸ್ತಿ A ಎಂದು ಇಂಗ್ಲೀಷನಲ್ಲಿ ತೋರಿಸಲಾಗಿದೆ, ಅದೆ ರೀತಿ ನೀವು ನಿಮ್ಮ ಪ್ರತಿವಾದ ಪತ್ರದಲ್ಲಿ ಸದರಿ ಆಸ್ತಿಯನ್ನು ಕನ್ನಡದಲ್ಲಿ ಎ ಎಂದು ಹೇಳಿದ್ದೀರಾ ಎಂದರೆ ಸರಿ. ಅನೂಸೂಚಿ ಬಿ ಆಸ್ತಿಯು ವಾದಿಗಳು ಇಂಗ್ಲೀಷನಲ್ಲಿ B ಎಂದು ತೋರಿಸಿದ್ದೀರಾ, ಸದರಿ ಆಸ್ತಿಯಲ್ಲಿ ಮನೆ ಇದೆ, ಅದು ಈಗಲೂ ನಿಮ್ಮ ಮತ್ತು ನಿಮ್ಮ ಸಹೋದರಿ ಮತ್ತು ನಿಮ್ಮ ತಾಯಿಯ ಜಂಟಿ ಹೆಸರಿನಲ್ಲಿ ಇದೆ ಎಂದರೆ ಸರಿ. ನಿಮ್ಮ ತಾಯಿ ಪರವಾಗಿ ಎಫ್ ಡಿ ಪಿ ಯಲ್ಲಿ ವಕೀಲರನ್ನು ಇಡದೆ ನೀವು ಮತ್ತು ನಿಮ್ಮ ಸಹೋದರಿ ಪ್ರಭಾವ ಬೀರಿ ಅವರಿಗೆ ಯಾವುದೆ ಹಿಸ್ಸೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈಗ ನನ್ನ ತಾಯಿಗೆ 70 ವರ್ಷ ವಯಸ್ಸಾಗಿದೆ. ನಿಮ್ಮ ತಾಯಿ ದುಡಿಯುವ ಶಕ್ತಿ ಸಾಮರ್ಥ್ಯ ಕಳೆದುಕೊಂಡಿದ್ದಾರೆ ಎಂದರೆ ಸರಿ. ನಿಮ್ಮ ಸಹೋದರಿ ವ್ಯವಹಾರಿಕ ಜ್ಞಾನ ಇಲ್ಲ ಎಂದರೆ ಸರಿಯಲ್ಲ. ನಿಮ್ಮ ಅಕ್ಕನಿಗೆ ಗಂಡ ತೀರಿಕೊಂಡಿದ್ದರಿಂದ ವಿಧವಾ ವೇತನ ಬರುತ್ತದೆ ಎಂದರೆ ಸರಿ. ನಿಮ್ಮ ಅಕ್ಕನಿಗೆ ವಿಧವಾ ವೇತನ ಮಾಡಿಸಿಕೊಡುತ್ತೇನೆಂದು ಹೇಳಿ ಅವರ ಕಡೆಯಿಂದ ಈ ಪತ್ರಗಳನ್ನು ಮೋಸದಿಂದ ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಸದರಿ ನಿಮ್ಮ ತಂದೆಯ ವಂಶಾವಳಿ ಉಳಿಯಬೇಕೆಂದರೆ ಅದಕ್ಕೆ ದತ್ತಕ ತೆಗೆದುಕೊಂಡರೆ ಉಳಿಯುತ್ತದೆ ಎಂದರೆ ಸಾಕ್ಷಿ ನನ್ನ ಮಗನನ್ನು ಕರೆದುಕೊಂಡು ಹೋಗಿದ್ದೆ ಆದರೆ ಸ್ಟ್ಯಾಂಪ್ ಬರೆಯುವವರು ನಿಮ್ಮ ಮಗನಿಗೆ 14 ವರ್ಷ ಆಗಿದೆ ಆದ್ದರಿಂದ ನನ್ನ ತಾಯಿ ನನ್ನ ಹೆಸರಿಗೆ ಆಸ್ತಿ ಮಾಡಿ ಮುಂದೆ ನಿಮ್ಮ ಮಗನಿಗೆ ಕೊಡು ಎಂದು ಹೇಳಿದ್ದಾರೆ. ನಿಮ್ಮ ಅಕ್ಕನಿಗೆ ಮತ್ತು ನಿಮ ಮಕ್ಕಳಿಗೆ 15 ವರ್ಷಕ್ಕಿಂತ ಮೇಲ್ಪಟ್ಟು ವಯಸ್ಸಿನ ಅಂತರ ಇದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ನಿಮ್ಮ ಮೇಲೆ ಮತ್ತು ನಿಮ್ಮ ಗಂಡನ ಮೇಲೆ ವಾದಿಗಳು ಹೆಚ್ಚಿನ ವಿಶ್ವಾಸ ಇಟ್ಟಿದ್ದರೂ ಎಂದರೆ ಸಾಕ್ಷಿ ನನ್ನ ಮೇಲೆ ತುಂಬಾ ವಿಶ್ವಾಸ ಇದಿದ್ದರಿಂದ ಆಸ್ತಿ ನನಗೆ ಮಾಡಿದ್ದಾರೆ ಎಂದು ಹೇಳುತ್ತಾರೆ. ನಿಮಗೆ ಸೇರಿದ ಬ್ಯಾಂಕ ಪಾಸ ಬುಕ್ಕ ಇದೆ ಎಂದರೆ ಸರಿ. 3 ಲಕ್ಷಕ್ಕಿಂತ ಹೆಚ್ಚು ಹಣ ನಿಮ್ಮ ತಾಯಿ ನಿಮ್ಮ ಗಂಡನ ಖಾತೆಗೆ ಹಾಕಿದ್ದಾರೆ ಎಂದರೆ ಸಾಕ್ಷಿ ನನ್ನ ಮೇಲಿನ ಪ್ರೀತಿಯಿಂದ ನನ್ನ ಗಂಡ ವ್ಯವಹಾರ ಮಾಡುತ್ತಿದ್ದರಿಂದ, ನನ್ನ ಗಂಡ

ವ್ಯವಹಾರಿಕನಾಗಿದ್ದಾನೆ ಅವರ ಖಾತೆಗೆ ಹಾಕಿದ್ದಾರೆ ಎಂದು ಹೇಳುತ್ತಾರೆ. ನಿಮ್ಮ ಮತ್ತು ನಿಮ್ಮ ಗಂಡನ ಮೇಲೆ ವಾದಿಗಳು ತುಂಬಾ ವಿಶ್ವಾಸ ಇಟ್ಟಿದ್ದರೂ ಆದ್ದರಿಂದ ನಿಮ್ಮ ಗಂಡನಾಗಲಿ ನೀವಾಗಲಿ ಎಲ್ಲಿ ಸಹಿ ಮಾಡಿ ಎಂದು ಹೇಳುತ್ತಿದ್ದೀರಿ ಅಲ್ಲಿ ಸಹಿ ಮಾಡುತ್ತಿದ್ದರು, ಆ ವಿಶ್ವಾಸ ದುರಪಯೋಗ ಪಡಿಸಿಕೊಂಡು ಸದರಿ ಭಕ್ಷಿಸ ಪತ್ರಗಳನ್ನು ಸೃಷ್ಟಿಸಿತ್ತಿದ್ದೀರಿ ಎಂದರೆ ಸರಿಯಲ್ಲ. ಆಸ್ತಿಗಳು ಇಲ್ಲದೆ ಇದ್ದರೆ ಅವರು ಬೀದಿ ಪಾಲಾಗುತ್ತರೆ ಎಂದರೆ ಸಾಕ್ಷಿ ಆವಾಗಲೂ ನಾನು ನೋಡುತ್ತೇನೆಂದು ಹೇಳಿದ್ದೇನೆ, ಈಗಲೂ ನಾನು ನೋಡಲು ತಯಾರು ಇದ್ದೇನೆಂದು ಹೇಳುತ್ತಾರೆ. ನೀವು ನಿಮ್ಮ ತಾಯಿ ಮತ್ತು ಸಹೋದರಿ ಕಡೆಯಿಂದ ಮೋಸದಿಂದ ದಾನ ಪತ್ರ ಬರೆಸಿಕೊಂಡ ಹಾಗೆ ನಿಮ್ಮ ಗಂಡನ ಮನೆಯವರ ಕಡೆಯಿಂದಲೂ ಸಹ ಸಾಕಷ್ಟು ಸುಳ್ಳು ದಾನಪತ್ರಗಳನ್ನು ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನೀವು ಮೋಸ ಮಾಡುವ ಉದ್ದೇಶದಿಂದ ಈ ಭಕ್ಷಿಸ ಕಾಗದ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಾಯಿ ಮತ್ತು ಸಹೋದರಿ ಅಕ್ಕಲು ಹುಷಾರಿನಿಂದ ಮತ್ತು ಸ್ವಸಂತೋಷದಿಂದ ಸದರಿ ಆಸ್ತಿಯನ್ನು ನಿಮಗೆ ದಾನವಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿ ನಿಮ್ಮ ತಂದೆಯ ಜೊತೆ ಮದುವೆ ಮಾಡಿಕೊಂಡಾಗಿನಿಂದ ದಾವಾ ಆಸ್ತಿಯನ್ನು ಅವರೆ ಉಪಭೋಗ ಮಾಡುತ್ತಿದ್ದಾರೆ ಮತ್ತು ಈಗಲೂ ಸಹ ಅವರೆ ಕಬ್ಜಾ ವಹಿವಾಟಿನಲ್ಲಿ ಇದ್ದಾರೆ ಎಂದರೆ ಸಾಕ್ಷಿ ದಾನವಾದ ದಿನದಿಂದ ನಾನೇ ಕಬ್ಜಾ ವಹಿವಾಟಿನಲ್ಲಿ ಇದ್ದೇನೆಂದು ಹೇಳುತ್ತಾರೆ. ನಿಮ್ಮ ತಾಯಿ ಆಸ್ತಿಯನ್ನು ಲಪಾಟಿಯಿಸಿಕೊಳ್ಳಲು ಸುಳ್ಳು ಕೈಫಿಯತ್ತು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
20.06.2026
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**